ಬಾಕಿ ವಿಚಾರದಲ್ಲಿ ಪ್ರಶ್ನೋತ್ತರ ವೇಳೆ ಅಲ್ಲದಿದ್ದರೆ ಬೇರೆ ರೂಪದಲ್ಲಿ ಅವರು ಪ್ರಶ್ನೆ ಮಾಡಲಿ. ಶ್ರೀ ನರೇಂದ್ರಬಾಬುರವರು ಅವರ ಕ್ಷೇತ್ರದಲ್ಲಿರತಕ್ಕಂಥ ಒಂದು ಕೈಗಾರಿಕೆಗೆ ಕೊಟ್ಟಿರತಕ್ಕಂಥ ಜಾಗದಲ್ಲಿ ಬಹುಮಹಡಿ ಕಟ್ಟಡಗಳು ಬಂದಿರತಕ್ಕಂಥದ್ದು, ಮುಂದೆ Fire accident ಆದರೆ ಅಥವಾ ಮತ್ತೇನಾದರೂ ತೊಂದರೆಯಾದರೆ ಎನ್ನುವ ಕಾಳಜಿ ಇರತಕ್ಕಂಥದ್ದು ಸ್ವಾಭಾವಿಕ. ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತಂದರೆ, ಈ ಬಿಡಿಎ ಮತ್ತು ಕಾರ್ಪೊರೇಷನ್ ಖಾತೆಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇರುವುದರಿಂದಾಗಿ ಅವರಿಗೆ ಈ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಕೇಳಿದರೆ ಯಾವಾಗ ಇದನ್ನು ಪರಭಾರೆ ಮಾಡಿದರು? ಇತ್ಯಾದಿ ಸ್ಪಷ್ಟವಾದ ಅಂಕಿಅಂಶಗಳು ಸಿಗುತ್ತವೆ. ಇದನ್ನು ಪರಭಾರೆ ಮಾಡಿ 2–3ವರ್ಷಗಳಾಗಿವೆ. ಮತ್ತೆ Kirloskarನವರು ಅವರು share ಅನ್ನು ಸಹಿತ ಮಾರಿಬಿಟ್ಟಿದ್ದಾರೆ. ಅದಕ್ಕೂ ಸಹಿತ Government ನವರು Permission ಕೊಟ್ಟಿದ್ದಾರೆ. ಅವೆಲ್ಲ ಮಾಹಿತಿ ಅವರಿಗೆ ಸಿಗುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 21ನೇ ಪಟ್ಟಿಯಲ್ಲಿರುವ 65 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ವಿಷಯ:

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇದೇ ವಿಷಯ ಹಿಂದೆ ಬೇರೆ ಬೇರೆ ನಿಯಮಗಳಡಿಯಲ್ಲಿ ಮಾತ ನಾಡಿದ್ದರಿಂದ ಇದನ್ನು ಬೇಗ ಚರ್ಚೆ ಮಾಡಿ ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಕಣಿವೆ ಯೋಜನೆ ಕುರಿತು ಆಂಧ್ರಪ್ರದೇಶದವರು ಅನಧಿಕೃತವಾದಂಥ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ ಎನ್ನುವ ಮಾಹಿತಿ ನಮಗೆ ಬಂದಿದೆ.